

ರಾಜಾ ರವಿವರ್ಮನ ಕಲ್ಪನೆಯಲ್ಲಿ ಕನಸಿನ ಲೋಕದಲ್ಲಿ ವಿಹರಿಸುತ್ತಿರುವ ಉಷಾ
ಕಲಾಕೃತಿ ಕೃಪೆ: ‘ಪರಸರಾಮ್ ಮಂಘಾರಾಮ್’ ಪ್ರಕಾಶನದ ‘ರಾಜಾ ರವಿವರ್ಮ: ದಿ ಪೈಂಟರ್ ಪ್ರಿನ್ಸ್’




■ ಗೀತಾ ಸೀತಾರಾಮ್

# ಮಹಾರಾಜ ಸಯ್ಯಾಜಿರಾವ್

ನನ್ನ ಹೊಸದಾಗಿ ಪುನರ್ ನಿರ್ಮಿಸಲ್ಪಟ್ಟ ಲಕ್ಷ್ಮಿವಿಲಾಸ ಅರಮನೆಗೆ ಹಲವು ದೊಡ್ಡ ಗಾತ್ರದ ಚಿತ್ರಪಟಗಳು ಬೇಕಿದ್ದವು. ನಾನು ಯೂರೋಪ್ ಖಂಡದ ಪ್ರವಾಸ ಮುಗಿಸಿ ಬರುವಾಗಲೇ ಹಲವು ಚಿತ್ರಪಟಗಳನ್ನು ಖರೀದಿಸಿ ತಂದಿದ್ದೆ. ಅವೆಲ್ಲಾ ಪಾಶ್ಚಾತ್ಯ ಚಿತ್ರಕಾರರದ್ದು. ಆದರೆ ನನಗೆ ಭಾರತೀಯ ಸಂಸ್ಕೃತಿಯ, ಪುರಾಣ ಇತಿಹಾಸಗಳ ಕಥೆಯನ್ನು ಬಣ್ಣಿಸುವ ಚಿತ್ರಗಳು ಬೇಕಿತ್ತು. ಎಂತಲೇ ಒಬ್ಬ ಭಾರತೀಯ ಕಲಾಕಾರನನ್ನು ಆಯ್ಕೆ ಮಾಡಬೇಕೆಂದು ದಿವಾನ್ ಮಾಧವರಾಯರಲ್ಲಿ ಬಿನ್ನವಿಸಿದೆ. ಆಗ ನಾವಿಬ್ಬರೂ ಉದಕಮಂಡಲದಲ್ಲಿದ್ದೆವು. ದಿವಾನರು ತಕ್ಷಣ ಹೇಳಿದರು ‘ಇಲ್ಲಿ ಯೋಚಿಸಲು ಏನೂ ಇಲ್ಲ ಪ್ರಭು! ಇಡೀ ಭಾರತದಲ್ಲೇ ನೀವು ಆಯ್ಕೆ ಮಾಡಬಹುದಾದ ಚಿತ್ರಕಾರರೆಂದರೆ ರಾಜಾ ರವಿವರ್ಮ ಒಬ್ಬರೇ!’

‘ಆದರೆ ಅವರು ನಮ್ಮ ಕರೆಯನ್ನು ಮನ್ನಿಸುವರೇ?’

‘ಖಂಡಿತವಾಗಿ. ಆದರೆ ಈಗವರು ಬೊಂಬಾಯಿಯಲ್ಲಿಲ್ಲ. ಅವರ ತಾಯಿ ತೀರಿಕೊಂಡಿರುವುದರಿಂದ ಕಿಳಿಮಾನೂರಿಗೆ ಬಂದಿದ್ದಾರೆ. ನೀವು ಅವರ ಅರಮನೆಗೆ ಹೋಗಬೇಕಾದರೆ ಅಥವಾ ನಿಮ್ಮ ಬರೋಡಾ ಆಸ್ಥಾನಕ್ಕೆ ಅವರನ್ನು ಕರೆಸಿಕೊಳ್ಳಬೇಕಾದರೆ, ಬ್ರಿಟಿಷ್ ರೀಜೆಂಟರ ಅಪ್ಪಣೆ ಪಡೆಯಬೇಕು. ಅವೆಲ್ಲಾ ತುಂಬಾ ದಿನಗಳಾಗುತ್ತವೆ. ಅದರ ಬದಲು ಅವರನ್ನು ಇಲ್ಲಿಗೇ ಕರೆಸಿಕೊಂಡು ಮಾತನಾಡಿ’ ಎಂದರು. ದಿವಾನರ ಸಲಹೆ ನನಗೆ ಮೆಚ್ಚುಗೆಯಾಯಿತು. ರಾಜಾ ರವಿವರ್ಮರಿಗೆ ಕರೆ ಕಳುಹಿಸಿದೆ.

ನನ್ನನ್ನು ನೋಡಲು ಬಂದ ರವಿವರ್ಮರೊಂದಿಗೆ ಕಾಫಿ ಕುಡಿಯುತ್ತಾ ಹೇಳಿದೆ ‘ಎಂಟು ವರ್ಷಗಳ